ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (97) 84 |
| ಸದಸ್ಯರ ಹೆಸರು | : | ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 08-12-2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪ್ರೌಢಶಾಲೆಗಳ ಸಹ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲು ಇರುವ ಹುದ್ದೆಗಳ ಸಂಖ್ಯೆ ಎಷ್ಟು: (ವಿಷಯವಾರು ಹುದ್ದೆಗಳ ವಿವರ ನೀಡುವುದು)</td><td>ಪ್ರೌಢಶಾಲೆಗಳ ಸಹ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲು ಪ್ರಸ್ತುತ ಇರುವ ಹುದ್ದೆಗಳ ಸಂಖ್ಯೆ: 1203.
<table>
<tr><th>ಕ್ರ.ಸ</th><th>ವಿಷಯ</th><th>ಬಡ್ತಿ ಕೋಟಾದ ಖಾಲಿ ಹುದ್ದೆಗಳ ಸಂಖ್ಯೆ:</th></tr>
<tr><td>1</td><td>ಕನ್ನಡ</td><td>247</td></tr>
<tr><td>2</td><td>ಇಂಗ್ಲೀಷ್</td><td>100</td></tr>
<tr><td>3</td><td>ಹಿಂದಿ</td><td>19</td></tr>
<tr><td>4</td><td>ಉರ್ದು</td><td>16</td></tr>
<tr><td>5</td><td>ಸಂಸ್ಕೃತ</td><td>10</td></tr>
<tr><td>6</td><td>ಇತಿಹಾಸ</td><td>82</td></tr>
<tr><td>7</td><td>ಅರ್ಥಶಾಸ್ತ್ರ</td><td>131</td></tr>
<tr><td>8</td><td>ಭೂಗೋಳಶಾಸ್ತ್ರ</td><td>21</td></tr>
<tr><td>9</td><td>ವಾಣಿಜ್ಯಶಾಸ್ತ್ರ</td><td>260</td></tr>
<tr><td>10</td><td>ಸಮಾಜಶಾಸ್ತ್ರ</td><td>163</td></tr>
<tr><td>11</td><td>ರಾಜ್ಯಶಾಸ್ತ್ರ</td><td>70</td></tr>
<tr><td>12</td><td>ಗಣಿತ</td><td>28</td></tr>
<tr><td>13</td><td>ಜೀವಶಾಸ್ತ್ರ</td><td>32</td></tr>
<tr><td>14</td><td>ಗಣಕವಿಜ್ಞಾನ</td><td>7</td></tr>
<tr><td>15</td><td>ಶಿಕ್ಷಣಶಾಸ್ತ್ರ</td><td>17</td></tr>
<tr><td colspan="2">ಒಟ್ಟು</td><td>1203</td></tr>
</table>
</td></tr>
</table>

| | | |
|---|---|---|
| (ಆ) | ಸಹ ಶಿಕ್ಷಕರಿಂದ ಉಪನ್ಯಾಸಕರ ಹುದ್ದೆಗೆ ಈ ಹಿಂದೆ ಯಾವಾಗ ಬಡ್ತಿ ನೀಡಲಾಗಿದೆ: ಬಡ್ತಿ ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | 2012 ರಲ್ಲಿ ಸಹ ಶಿಕ್ಷಕರಿಂದ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲಾಗಿದೆ.<br>ಗಮನಕ್ಕೆ ಬಂದಿರುತ್ತದೆ. |
| ಇ) | ಯಾವ ಕಾಲಮಿತಿಯಲ್ಲಿ ಸಹ ಶಿಕ್ಷಕರಿಂದ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲಾಗುವುದು? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಇಪಿ 204 ಎಸ್ ಹೆಚ್ ಹೆಚ್ 2025, ದಿನಾಂಕ: 24-09-2025 ರಲ್ಲಿ ಪ್ರೌಢಶಾಲಾ ಸಹ ಶಿಕ್ಷಕರ ವೃಂದದಿಂದ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಸಂಬಂಧ ಸಹ ಶಿಕ್ಷಕರಿಗೆ ಮುಂಬಡ್ತಿ ನೀಡುವ ಮೊದಲಿಗೆ ಅರ್ಹತಾ ಪರೀಕ್ಷೆಯನ್ನು ನಡೆಸಲು ಕೇಂದ್ರಿಯ ದಾಖಲಾತಿ ಘಟಕ, ಶಾಲಾ ಶಿಕ್ಷಣ ಇಲಾಖೆ, ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ, ಕಾವೇರಿ ಭವನದ ಎದರು, ಕೆಂಪೇಗೌಡ ರಸ್ತೆ, ಬೆಂಗಳೂರು ಇವರನ್ನು ಸಕ್ಷಮ ಪ್ರಾಧಿಕಾರಿಯಾನ್ನಾಗಿ ನಿರ್ದಿಷ್ಟಪಡಿಸಿ ಆದೇಶಿಸಲಾಗಿದೆ.<br><br>ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರಿಗೆ ಸರ್ಕಾರಿ ಪೌಢಶಾಲಾ ಸಹಶಿಕ್ಷಕರ ವೃಂದದಿಂದ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದಕ್ಕೆ ಬಡ್ತಿ ನೀಡುವ ಸಂಬಂಧ ಅರ್ಹತಾ ಪರೀಕ್ಷೆ ನಡೆಸಲು ಅಧಿಸೂಚನೆ ಹೊರಡಿಸುವಂತೆ ದಿನಾಂಕ: 27.11.2025 ರಲ್ಲಿ ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯಿಂದ ಕೋರಲಾಗಿದೆ.<br><br>ಅದರಂತೆ ಕೇಂದ್ರಿಯ ದಾಖಲಾತಿ ಘಟಕ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಅರ್ಹತಾ ಪರೀಕ್ಷೆ ನಡೆಸಿ, ಅರ್ಹ ಸಹ ಶಿಕ್ಷಕರ ಪಟ್ಟಿಯನ್ನು ಸಲ್ಲಿಸಿದ ನಂತರ ಬಡ್ತಿ ನೀಡಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಇಪಿ 385 ಡಿಜಿಡಬ್ಲ್ಯೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು